3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು

**Spl.C. No. 26/2020**

ಪ್ರಾಸಾ 6

ಚಾಸಾ 6

| | |
|---|---|
| ಹೆಸರು | ಗಿರಿಯಪ್ಪ |
| ತಂದಯ ಹೆಸರು | ಲೇಟ್ ಸಣ್ಣತಿಮ್ಮಯ್ಯ |
| ವಯಸ್ಸು | 55 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸಸ್ಥಳ | ಸಿಂಗದಹಳ್ಳಿ |

ಸಾಕ್ಷಿಯನ್ನು ದಿನಾಂಕ 17.01.2026 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1) ಚಾಸಾ.1 ರವರು ನನ್ನ ಅಣ್ಣನ ಮಗಳು. ಚಾಸಾ.2 ರವರು ನನ್ನ ತಮ್ಮನ ಹೆಂಡತಿ. ಚಾಸಾ.3 ರವರು ನನ್ನ ಹೆಂಡತಿ. ಚಾಸಾ.4 ರವರು ನನ್ನ ಅಕ್ಕ. ಚಾಸಾ.5 ರವರು ಗೊತ್ತಿಲ್ಲ.

2) ನಮಗೆ ಸಿಂಗದಹಳ್ಳಿ ಗ್ರಾಮದ ಸ.ನಂ.24/1 ಎಫ್ ನಲ್ಲಿ 1 ಎಕರೆ 12 ಗುಂಟೆ ಜಮೀನು ಇರುತ್ತದೆ. ದಿನಾಂಕ 12.10.2019 ರಂದು ನಾನು ಚಿಕ್ಕನಾಯಕನಹಳ್ಳಿ ಯಲ್ಲಿದ್ದಾಗ ಸಂಜೆ 4 ಗಂಟೆಗೆ ಚಾಸಾ.1 ರಿಂದ 3 ರವರು ಚಿಕ್ಕನಾಯಕನಹಳ್ಳಿ ಸರ್ಕಾರಿ ಆಸ್ಪತ್ರೆಗೆ ಬಂದಿರುತ್ತಾರೆ. ಅವರುಗಳನ್ನು ನಾನು ವಿಚಾರಿಸಿದಾಗ ಮಧ್ಯಾಹ್ನ 3 ಗಂಟೆಗೆ ಅವರು ನಮ್ಮ ಜಮೀನಿನ ಹತ್ತಿರ ಹೋದಾಗ ಈ ಜಮೀನು ನಮಗೆ ಸೇರಬೇಕು, ನಿಮ್ಮದಲ್ಲ ಎಂದು ಆರೋಪಿತರು ಚಾಸಾ.1 ಮತ್ತು 2 ರವರಿಗೆ ಮಾದಿಗ ಮುಂಡೇರಾ,

ತೋಟಕ್ಕೆ ಏಕೆ ಬಂದಿದ್ದೀರಾ ಎಂದು ಬೈದು ಜಾತಿನಿಂದನೆ ಮಾಡಿ ಅವರ ಮೇಲೆ 4 ನೇ ಆರೋಪಿಯು ಚಾಸಾ.2 ರವರ ಸೊಂಟಕ್ಕೆ ದೊಣ್ಣೆಯಿಂದ ಹೊಡೆದಿರುತ್ತಾರೆ, 3 ನೇ ಆರೋಪಿಯು ಚಾಸಾ.2 ರವರ ಜುಟ್ಟನ್ನು ಹಿಡಿದು ಎಳೆದಾಡಿ, ಕಾಲಿನಿಂದ ಒದ್ದು, ಸೀರೆಯನ್ನು ಹಿಡಿದು ಎಳೆದಾಡಿ, ಕೈಗಳಿಂದ ಗುದ್ದಿರುತ್ತಾರೆ. ಬಸವರಾಜುರವರು ಉಮಾದೇವಿರವರಿಗೆ ಏಕೆ ಮಾದಿಗ ಮುಂಡೇ , ನಮ್ಮ ತೋಟಕ್ಕೆ ಬಂದಿದ್ದೀಯಾ ಎಂದು ಬೈದು ಕಾಲಿನಂದ ಒದ್ದು, ಕೈಗಳಿಂದ ಗುದ್ದಿರುತ್ತಾರೆ. 2 ನೇ ಆರೋಪಿಯು ಉಮಾದೇವಿರವರಿಗೆ ಈ ಮಾದಿಗ ಮುಂಡೆಯನ್ನು ಇಲ್ಲಿಯೇ ರೇಪ್ ಮಾಡಿ ಸಾಯಿಸಿ ಹೂತು ಹಾಕೋಣ ಎಂದು ಅವರನ್ನು ಓಡಿಸಿಕೊಂಡು ಹೋಗಿ ಅವರ ನೈಟಿಯ ಮುಂಭಾಗವನ್ನು ಹಿಡಿದುಕೊಂಡು ಹರಿದುಹಾಕಿರುತ್ತಾರೆ ಎಂದು ಚಾಸಾ.1 ಮತ್ತು 2 ರವರು ನನಗೆ ತಿಳಿಸಿರುತ್ತಾರೆ. ಅವರನ್ನು ನಾನು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಯನ್ನು ಕೊಡಿಸಿರುತ್ತೇನೆ.

3) ದಿಃ19.10.2019 ರಂದು ಚಾಸಾ.1 ರವರು ದೂರನ್ನು ಕೊಟ್ಟಿರುತ್ತಾರೆ. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

(ಈ ಹಂತದಲ್ಲಿ ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ಭಾಗಶಃ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ಸರ್ಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗಂಡು ಅನುಮತಿ ನೀಡಲಾಯಿತು)

**ಪಾಟೀಸವಾಲುಃ ಸರ್ಕಾರಿ ಅಭಿಯೋಜಕರವರಿಂದಃ**

4) 2 ನೇ ಆರೋಪಿಯು ಚಾಸಾ.1 ರವರಿಗೆ ಕೈಯಿಂದ ಗುದ್ದಿರುತ್ತಾರೆಂದು ನನಗೆ ತಿಳಿಸಿರುತ್ತಾರೆ ಎಂದರೆ ಸರಿ. ಆಗ ಚಾಸಾ.1 ರವರನ್ನು ಬಿಡಿಸಿಕೊಳ್ಳಲು ಚಾಸಾ.2 ರವರು ಬಂದಾಗ ಅವರಿಗೆ ಜಯಣ್ಣರವರು ಕಾಲಿನಿಂದ ಒದ್ದು ಕೈಗಳಿಂದ ಕುತ್ತಿಗೆಗೆ ಹೊಡೆದು ಮಾದಿಗ ಮುಂಡೆ, ನಮ್ಮ ಜಮೀನಿಗೆ ಏಕೆ ಬಂದಿದ್ದೀಯಾ ಎಂದು ಬೈದು ಗಲಾಟೆ ಮಾಡಿರುತ್ತಾರೆಂದು ನನಗೆ ತಿಳಿಸಿದರು ಎಂದರೆ ಸರಿ. ಸಂಬಂಧಿಕರಾದ ನಮ್ಮೊಂದಿಗೆ ಚರ್ಚೆ ಮಾಡಿ ತಡವಾಗಿ ದೂರನ್ನು ಕೊಟ್ಟಿರುತ್ತಾರೆ ಎಂದರೆ ಸರಿ.

**<u>ಪಾಟೀಸವಾಲುಃ ಆರೋಪಿಗಳ ಪರ ಶ್ರೀ.N.B. ವಕೀಲರಿಂದ :</u>**

5) ನನ್ನನ್ನು ಗಿರೀಶ್ ಎಂದು ಕರೆಯುತ್ತಾರೆ ಎಂದರೆ ಸರಿಯಲ್ಲ. ನಾನು ಪದವೀಧರ ಎಂದರೆ ಸರಿಯಲ್ಲ. ನಾನು ಪದವೀಧರನಾಗಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗಲಾಟೆಯಾಯಿತು ಎನ್ನಲಾದ ಜಮೀನು ಆರೋಪಿತರ ಸ್ವಾಧೀನದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಈ ಪ್ರಕರಣ ದಾಖಲಾದ ನಂತರ ಪೊಲೀಸರು ಚಿಕ್ಕನಾಯಕನಹಳ್ಳಿ ತಹಸೀಲ್ದಾರ್ ರವರಿಗೆ ಪತ್ರವನ್ನು ಬರೆದು ಜಮೀನನ್ನು ಅಳತೆ ಮಾಡಿ ಸ್ವಾಧೀನದ ಬಗ್ಗೆ ವರದಿ ನೀಡುವಂತೆ ಕೋರಿದ್ದರು ಎಂದರೆ ಸರಿ. ದಿಃ11.11.2019 ರಂದು ತಾಲ್ಲೂಕು ಸರ್ವೇಯರ್, ಗ್ರಾಮ ಲೆಕ್ಕಿಗರು ಜಮೀನಿನ ಹತ್ತಿರ ಬಂದಿದ್ದರು ಎಂದರೆ ಗೊತ್ತಿಲ್ಲ. ತಾಲ್ಲೂಕಾ ಸರ್ವೇಯರ್ ರವರು ಜಮೀನನ್ನು ಅಳತೆ ಮಾಡಿರುವುದಿಲ್ಲ. ತಹಸೀಲ್ದಾರ್ ರವರ ಸೂಚನೆಯ ಮೇರೆಗೆ, ಭೂಮಾಪಕರು, ಗ್ರಾಮಲೆಕ್ಕಿಗರು ಜಮೀನಿಗೆ ಭೇಟಿ ನೀಡಿ ಅಳತೆ ಮಾಡಿ ವರದಿಯನ್ನು ನೀಡಿರುತ್ತಾರೆ ಎಂದರೆ ಸಾಕ್ಷಿಯು ನಮಗೆ ನೋಟೀಸು ನೀಡಿಲ್ಲ ಎಂದು ನುಡಿಯುತ್ತಾರೆ. ಸದಳ ಪರಿಶೀಲನಾ ವೇಳೆಯಲ್ಲಿ ನಾನು, ನನ್ನ ಅಣ್ಣ ತಮ್ಮಂದಿರು ಎಲ್ಲರೂ ಸ್ಥಳದಲ್ಲಿದ್ದೆವು ಎಂದರೆ ಸರಿಯಲ್ಲ. ಸ್ಥಳ ಪರೀಶೀಲನಾ ಕಾಲದಲ್ಲಿ ಆರೋಪಿತರು ಜಮೀನಿನ ಸ್ವಾಧೀನದಲ್ಲಿರುತ್ತಾರೆಂದು ಕಂಡು ಬಂದಿದ್ದು ಆ ಬಗ್ಗೆ ವರದಿ ನೀಡಿರುತ್ತಾರೆ ಎಂದರೆ ಸರಿಯಲ್ಲ.

6) ಆರೋಪಿತರ ಪೂರ್ವಿಕರು ದಿಃ18.07.1955 ರಲ್ಲಿ ಕ್ರಯಕ್ಕೆ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸ.ನಂ.24/1F ಸಿಂಗದಹಳ್ಳಿ ಗ್ರಾಮದ 1 ಎಕರೆ 12 ಗುಂಟೆ ಜಮೀನು ಸಣ್ಣತಿಮ್ಮಯ್ಯ ಬಿನ್ ತಿಮ್ಮಯ್ಯರವರ ಹೆಸರಿನಲ್ಲಿದ್ದು ಅವರು ನಮ್ಮ ತಂದೆ ಎಂದು ಹೇಳಿಕೊಂಡು ಆರೋಪಿತರ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸ.ನಂ.24/1F ರ ಜಮೀನು ಅಸ್ತಿತ್ವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಜಮೀನು ನಮ್ಮದು ಎಂದು ತೋರಿಸಲು ಪೊಲೀಸರಿಗೆ ದಾಖಲಾತಿಯನ್ನು ಕೊಟ್ಟಿರುತ್ತೇವೆ.

7) 2 ನೇ ಆರೋಪಿಯು ಅವರು ಜಮೀನಿನಲ್ಲಿ ಬೆಳೆದಿರುವ ಅಡಿಕೆಯನ್ನು ನಾನು ಮತ್ತು ನನ್ನ ಅಣ್ಣ ತಮ್ಮಂದಿರು ಕಳ್ಳತನ ಮಾಡಿಕೊಂಡು ಹೋಗಿರುತ್ತೇವೆ ಎಂದು ಹೇಳಿರುವ ಜಮೀನಿನ ಬಗ್ಗೆ ಅ.ದಾ.ಸಂ.192/2019 ರಂತೆ ನಮ್ಮ ವಿರುದ್ದ ಸಿವಿಲ್ ದಾವೆಯನ್ನು ಹಾಕಿರುತ್ತಾರೆ ಎಂದರೆ ಸರಿ. ಆ ದಾವೆಯಲ್ಲಿ ನಾನು ಹಾಜರಾಗಿ ತಕರಾರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ದಾವೆಯಲ್ಲಿ ವಿಚಾರಣೆಯಾಯಿತು ಎಂದರೆ ಸರಿ. ನಂತರ ಸದರಿ ದಾವೆಯು 2 ನೇ ಆರೋಪಿಯ ಪರ ಡಿಕ್ರಿಯಾಗಿರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಿನ ಜಮೀನಿನಲ್ಲಿ ನಾವು ಅಡಿಕೆ ಕಾಯಿ ಕಳ್ಳತನ ಮಾಡಿದ್ದೆವು ಎಂದರೆ ಸರಿಯಲ್ಲ. ನಾವು ಅಡಿಕೆ ಕಳ್ಳತನ ಮಾಡಿರುತ್ತೇವೆಂದು 2 ನೇ ಆರೋಪಿಯು ನಮ್ಮ ವಿರುದ್ದ ದೂರನ್ನು ನೀಡಿದ್ದು ಆ ಪ್ರಕರಣದ ವಿಚಾರಣೆಯು ಚಿಕ್ಕನಾಯಕನಹಳ್ಳಿ ನ್ಯಾಯಾಲಯದಲ್ಲಿ ನಡೆಯುತ್ತಿದೆ ಎಂದರೆ ಸರಿ. 2 ನೇ ಆರೋಪಿ ನಮ್ಮ ವಿರುದ್ದ ದೂರು ನೀಡಿದ ಐದು ದಿನಗಳ ನಂತರ ಆ ಪ್ರಕರಣದಲ್ಲಿ ವಿಚಾರಣೆಯಾಗಿ ನಮಗೆ ಶಿಕ್ಷೆಯಾಗುತ್ತದೆ ಎಂದು ಭಾವಿಸಿ ಚಾಸಾ.1 ರವರ ಮುಖಾಂತರ ನಾನು ಸುಳ್ಳು ದೂರನ್ನು ಕೊಡಿಸಿದ್ದೇನೆ ಎಂದರೆ ಸರಿಯಲ್ಲ.

8) ಚಾಸಾ.1 ರಿಂದ 3 ರವರು ಆಂಬುಲೆನ್ಸ್ ವಾಹನದಲ್ಲಿ ಸಂಜೆ 4.30 ಗಂಟೆಗೆ ಚಿಕ್ಕನಾಯಕನಹಳ್ಳಿ ಆಸ್ಪತ್ರೆಯ ಹತ್ತಿರ ಬಂದಿರುತ್ತಾರೆ. ಅವರನ್ನು ನಾನು ಭೇಟಿ

ಮಾಡಿದಾಗ ಘಟನೆ ಯಾವ ರೀತಿ ಆಯಿತು ಎಂದು ನನಗೆ ತಿಳಿಸಿರುತ್ತಾರೆ. ಆಸ್ಪತ್ರೆಯ ಪಕ್ಕದಲ್ಲಿ ಚಿಕ್ಕನಾಯಕನಹಳ್ಳಿ ಪೋಲೀಸ್ ಠಾಣೆ ಇರುತ್ತದೆ ಎಂದರೆ ಸರಿ. ಸದರಿ ಪೋಲೀಸ್ ಠಾಣೆಗೆ ಹೋಗಿ ದೂರನ್ನು ನೀಡಲು ನಿಮಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ನಾನೇಕೆ ದೂರು ನೀಡಲಿ, ಗಾಯಾಳು ದೂರು ಕೊಡುತ್ತಾರೆ ಎಂದು ನುಡಿಯುತ್ತಾರೆ. ಚಾಸಾ.1 ಮತ್ತು 2 ರವರನ್ನು ನಾನು ಆಸ್ಪತ್ರೆಯ ಒಳಗೆ ಕರೆದುಕೊಂಡು ಹೋಗಿರುವುದಿಲ್ಲ. ಚಾಸಾ.1 ರಿಂದ 3 ರವರು ಆಂಬುಲೆನ್ಸ್ ವಾಹನದಲ್ಲಿ ಬಂದು ಆಸ್ಪತ್ರೆಯ ಒಳಗೆ ಹೋದ ನಂತರ ನಾನು ಆಸ್ಪತ್ರೆಗೆ ಹೋಗಿರುತ್ತೇನೆ. ಚಾಸಾ.1 ಮತ್ತು 2 ರವರಿಗೆ ಚಿಕಿತ್ಸೆ ಕೊಟ್ಟ ನಂತರ ಏನಾಯಿತು ಎಂದು ನಾನು ವಿಚಾರಿಸಿರುತ್ತೇನೆ.

9) ವೈದ್ಯರು ಚಾಸಾ.1 ಮತ್ತು 2 ರವರನ್ನು ಕೇಳಿ ಏಟುಗಳು ಯಾವ ರೀತಿ ಆಯಿತು ಎಂದು ಬರೆದುಕೊಂಡಿರುತ್ತಾರೆ. ವೈದ್ಯರು ಪೋಲೀಸ್ ಠಾಣೆಗೆ ಮಾಹಿತಿ ಪತ್ರವನ್ನು ಕಳುಹಿಸುತ್ತೇವೆ, ನೀವು ಹೋಗಿ ಎಂದು ನನಗೆ ತಿಳಿಸಿರುತ್ತಾರೆ. ನಾನು ಆಸ್ಪತ್ರೆಯ ಒಳಗೆ ಹೋದಾಗ ಚಾಸಾ.1 ಮತ್ತು 2 ರವರು ಗಲಾಟೆಯ ಬಗ್ಗೆ ಮಾಹಿತಿ ನೀಡಿ ಚಿಕಿತ್ಸೆಯನ್ನು ಪಡೆದುಕೊಳ್ಳುತ್ತಿದ್ದರು. ಚಾಸಾ.1 ಮತ್ತು 2 ರವರು ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾಗ ಪೊಲೀಸರು ಬಂದಿರುವುದಿಲ್ಲ. ಚಾಸಾ.1 ರಿಂದ 3 ರವರು ಒಟ್ಟಾಗಿ ಬಂದು ಚಿಕಿತ್ಸೆ ಪಡೆದುಕೊಂಡು ಸಂಜೆ 7 ಗಂಟೆಗೆ ಒಟ್ಟಾಗಿ ಊರಿಗೆ ಹೋಗಿರುತ್ತಾರೆ. ನಾನೂ ಸಹ ಅ ಅವರೊಂದಿಗೆ ಊರಿಗೆ ವಾಪಸ್ ಹೋಗಿರುತ್ತೇನೆ. ವಾಪಸ್ ಹೋಗುವಾಗ ಪೋಲೀಸ್ ಠಾಣೆಗೆ ಹೋಗಿ ದೂರನ್ನು ನೀಡಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಒಟ್ಟು ನಾವು 5 ಜನರು ಅಣ್ಣ ತಮ್ಮಂದಿರು ಇದ್ದು ಎಲ್ಲರೂ ಚರ್ಚೆ ಮಾಡಿ ದೂರನ್ನು ನೀಡಬೇಕಾಗಿತ್ತು ಎಂದು ನುಡಿಯುತ್ತಾರೆ. ಮಾರನೇ ದಿನ ದೂರನ್ನು ಕೊಟ್ಟಿರುವುದಿಲ್ಲ.

10) ಕಳ್ಳತನ ಕೇಸು ನಮ್ಮ ಮೇಲೆ ಬರುತ್ತದೆ ಎಂದು ಚಾಸಾ.1 ಮತ್ತು 2 ರವರನ್ನು ನಾನೇ ಕರೆದುಕೊಂಡು ಬಂದು ಆಸ್ಪತ್ರೆಯಲ್ಲಿ ಗಾ.ಪ್ರ.ಪತ್ರವನ್ನು ಮಾಡಿಸಿ ಸುಳ್ಳ

ದೂರನ್ನು ಕೊಡಿಸಿದ್ದೇನೆ ಎಂದರೆ ಸರಿಯಲ್ಲ. ದೂರನ್ನು ನಾನೇ ಬರೆಸಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ಆರೋಪಿತರ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

11) ಈ ಪ್ರಕರಣ ದಾಖಲಾದ ನಂತರ ಆರೋಪಿತರ ಗಂಗಣ್ಣ ಮತ್ತು ಇತರರ ಮೇಲೆ ಮಾರಣಾಂತಿಕ ಹಲ್ಲೆ ಮಾಡಿರುವ ಬಗ್ಗೆ ತಿಪಟೂರಿನ ಜಿಲ್ಲಾ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುತ್ತದೆ ಎಂದರೆ ಸರಿ. ಸದರಿ ಪ್ರಕರಣ ದಾಖಲಾದ ನಂತರ ನನ್ನ ತಮ್ಮ ಆರೋಪಿತರ ವಿರುದ್ದ ಜಾತಿನಿಂದನೆ ಪ್ರಕರಣವನ್ನು ದಾಖಲು ಮಾಡಿರುತ್ತಾನೆ ಎಂದರೆ ಸರಿ. ನಾನು R.T.I. ಕಾರ್ಯಕರ್ತ ಎಂದರೆ ಸರಿಯಲ್ಲ. R.T.I ಕಾಯಿದೆಯಡಿಯಲ್ಲಿ ನಾನು ಸುಳ್ಳು ಅರ್ಜಿಗಳನ್ನು ನೀಡಿ ಜನರಿಗೆ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ತುಮಕೂರು.

ಸಾಕ್ಷಿಯ ಸಹಿ